ಈ. ಹಾಗಿದ್ದಲ್ಲಿ ಈ ಯೋಜನೆಯಡಿಯಲ್ಲಿ ಮಾಸಲ್ಪಟ್ಟಿರುವ ಹಣ ಎಷ್ಟು

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು):

ಅ. ಹಂಚಲ್ಪಡಬೇಕಾಗಿರುವ ನಿವೇಶನಗಳ ಸಂಖ್ಯೆ 6,50,000
ಹಂಚಲಾಗಿರುವ ನಿವೇಶನಗಳ ಸಂಖ್ಯೆ 8,13,343

ಆ. ಆಶ್ರಯ ನಿವೇಶನ ವಿತರಣೆ ಮಾಡುವ ಸಮಿತಿಗಳು ರದ್ದುಗೊಳಿಸಲಾಗಿದೆ. ಆದರೆ ಸದರಿ ಕೆಲಸ ಮುಂದುವರೆಸುವ ಜವಾಬ್ದಾರಿ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ ವಹಿಸಲಾಗಿದೆ. ಕಾರ್ಯಕ್ರಮ ಕುಂಠಿತವಾಗಿರುವುದಿಲ್ಲ.

ಇ. ಹೌದು, ಈ ಯೋಜನೆಯನ್ನು 95-96 ವರ್ಷದಲ್ಲೂ ಮುಂದುವರೆಸಲಾಗಿದೆ.

ಈ. ನಿವೇಶನಕ್ಕಾಗಿ ಜಮೀನು ಸ್ವಾಧೀನಪಡಿಸಿಕೊಳ್ಳಲು ರೂ. 15.00 ಕೋಟಿ ಒದಗಿಸಲಾಗಿದೆ.

ವಿಷಯ : ಶಾಶ್ವತ ಕೈಗಾರಿಕಾ ವಸ್ತು ಪ್ರದರ್ಶನ ಸ್ಥಾಪಿಸುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 758 (409)

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಬೆಂಗಳೂರಿನ ಕೈಗಾರಿಕಾ ಕ್ಷೇತ್ರವು ಬೃಹದಾಕಾರವಾಗಿ ಬೆಳೆಯುತ್ತಿರುವುದು ಮತ್ತು ವಿದೇಶಿ ಬಂಡವಾಳ ಹೂಡಿಕೆ ಹೆಚ್ಚಾಗಿರುವುದು ಸರ್ಕಾರಕ್ಕೆ ತಿಳಿದಿದೆಯೆ ?

ಆ. ಕೈಗಾರಿಕಾ ಬೆಳಣಿಗೆಯ ದೃಷ್ಟಿಯಿಂದ ದೆಹಲಿ ಮಾದರಿಯ 'ಪ್ರಗತಿ ಮೈದಾನ' ರೀತಿ ಶಾಶ್ವತ ಕೈಗಾರಿಕಾ ವಸ್ತುಪ್ರದರ್ಶನ ಕೇಂದ್ರ ಸ್ಥಾಪಿಸಲು ಸರ್ಕಾರವು ಯೋಚಿಸುತ್ತಿದೆಯೆ ?

ಇ. ಬೆಂಗಳೂರು ಇಡೀ ದಕ್ಷಿಣ ಭಾರತದಲ್ಲೇ ಪ್ರತಿಷ್ಠಿತ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿರುವುದರಿಂದ ಅಂತಹ ಒಂದು ವಸ್ತುಪ್ರದರ್ಶನಾಲಯ ಸ್ಥಾಪಿಸಲು ಕ್ರಮ ಕೈಗೊಳ್ಳುವಿರಾ ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ. ಹೌದು.

ಆ. ಹೌದು.

ಇ. ಹೌದು. ಸರ್ಕಾರವು ಈ ರೀತಿಯ ಕಾರ್ಯಕ್ರಮವನ್ನು ಪ್ರೋತ್ಸಾಹಿಸುವುದು.

ವಿಷಯ : ರಾಜ್ಯದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 760 (709)

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರಾ.